**ಎಂ ವಿ ಸಿ 1559/2023 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿ: 24.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎನ್ ಎಂ ಜಿ ವಕೀಲರಿಂದಃ**

4 ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ 37 ರಿಂದ 40 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಡಿ ಜಿ ಎನ್ ವಕೀಲರಿಂದಃ**

ನನಗೆ ಈಗ 70 ವರ್ಷಗಳಾಗಿರಬಹುದು. ಅಪಘಾತ ಆದ ದಿನ ನಾನು ನನ್ನ ಮೊಮ್ಮಗನ ಸ್ಕೂಟರ್ ನಲ್ಲಿ ಹೋಗುತ್ತಿದ್ದೆ. ನನ್ನ ಮೊಮ್ಮಗನು ಸ್ಕೂಟರ್ ನ್ನು ಓಡಿಸುವಾಗ ಸ್ಕಿಡ್ ಆಗಿ ಬಿದ್ದ ಕಾರಣ ಹಿಂಬದಿ ಸವಾರನಾಗಿದ್ದ ನನಗೆ ಗಾಯಗಳಾದವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ತನ್ನ ಮೊಮ್ಮಗನ ಸ್ಕೂಟರ್ ನಲ್ಲಿ ಪೆಟ್ರೋಲ್ ಖಾಲಿಯಾದ ಕಾರಣ ನಡೆದುಕೊಂಡು ಹೋಗುತ್ತಿದ್ದಾಗ ಮತ್ತೊಂದು ವಾಹನ ಬಂದು ಡಿಕ್ಕಿಪಡಿಸಿದ ಕಾರಣ ತನಗೆ ಗಾಯಗಳಾಯಿತು ಎಂದು ಹೇಳುತ್ತಾರೆ. ಅಪಘಾತ ಆದ 5 ದಿನಗಳ ನಂತರ ನನ್ನ ಮೊಮ್ಮಗನಾದ ಸುರೇಶ ಜೆ ಎನ್ ದೂರು ನೀಡಿದ್ದಾರೆ ಎಂದರೆ ಸರಿ. ಅಪಘಾತ ಆದ ತಕ್ಷಣ ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ಹೋಗಿ ಆನಂತರ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಹೋದೆವು. ಕೆ ಆರ್ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿ ನನ್ನ ಕಾಲಿಗೆ ರಾಡು ಹಾಕಿದ್ದಾರೆ. ಆಸ್ಪತ್ರೆಯಲ್ಲಿ ರೂ. 1 ಲಕ್ಷ ವೈದ್ಯಕೀಯ ವೆಚ್ಚ ಮತ್ತು ಇತರೆ ಖರ್ಚುಗಳಿಗೆ ರೂ. 90 ಸಾವಿರ ಆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೇಸಾಯ ಮೂಲಕ ವರ್ಷಕ್ಕೆ 2 ಲಕ್ಷ ಮತ್ತು ಮರಗೆಲಸ ಮಾಡಿ ತಿಂಗಳಿಗೆ ರೂ. 20 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ. ನಾನು ಹಿಂಬದಿ ಸವಾರನಾಗಿ ಪ್ರಯಾಣ ಮಾಡುತ್ತಿದ್ದ ನನ್ನ ಮೊಮ್ಮಗನ ದ್ವಿಚಕ್ರ ವಾಹನ ಸ್ಕಿಡ್ ಆಗಿ ಬಿದ್ದು ನನಗೆ ಗಾಯಗಳಾಗಿದ್ದರೂ ಸಹ ಬೇರೆ ವಾಹನ ಅಪಘಾತಪಡಿಸಿ ನನಗೆ ಗಾಯಗಳಾಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಸಾ ಓ ಹೇ ಸ ಒ

(ಬಾಬು ಎನ್)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಪಾಂಡವಪುರ